1	2	3	4	5	6	7	8
6.	Bidar	479	369.73	75	151.52	554	521.25
7.	Bijapur	342	615.31	161	163.80	503	779.11
8.	Chamarajnagar	120	120.32	103	146.61	223	266.93
9.	Chitradurga	209	415.59	202	390.46	411	806.05
10.	Chickmagalur	113	148.11	168	279.42	281	427.53
11.	Davanagere	284	655.75	18	22.49	302	678.24
12.	Dharwad	470	1084.99	234	433.15	704	1518.14
13.	Dakshina Kannada	819	1750.18	55	37.05	874	1787.23
14.	Gadag	245	269.36	75	64.23	320	333.59
15.	Gulbarga	173	386.52	256	642.02	429	1028.54
16.	Hassan	236	470.62	340	373.95	576	844.57
17.	Haveri	119	136.48	118	149.52	237	286.00
18.	Karwar	900	1522.65	254	286.62	1154	1809.27
19.	Kodagu	61	79.08	89	298.95	150	378.03
20.	Kolar	1042	2260.80	583	1401.26	1625	3662.03
21.	Koppal	162	470.15	73	515.20	235	985.35
22.	Mandya	253	383.01	148	193.80	401	576.81
23.	Mysore	844	2319.00	69	133.00	913	2452.00
24.	Raichur	66	143.98	176	472.63	242	616.61
25.	Shimoga	320	542.16	101	153.75	421	695.91
26.	Tumkur	798	1869.32	471	792.3	1269	2681.62
27.	Udupi	860	1581.49	45	72.26	905	1653.75
	Total	**12796**	**29383.92**	**5483**	**11163.44**	**18279**	**40567.36**

ಕರಾವಳಿ ಸಮುದ್ರದ ಮೀನುಗಾರಿಕೆ

3689(4350) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರಾವಳಿ ಸಮುದ್ರದ ಆಳವಾದ ಸ್ಥಳಗಳಲ್ಲಿ ಮೀನುಗಾರಿಕೆ ಮಾಡುವವರಿಗೆ ವಿದ್ಯುತ್ ಯಂತ್ರದ ಸಹಾಯದ ಮೂಲಕ ಮೀನುಗಾರಿಕೆ ಮಾಡುವ ಮೀನುಗಾರರಿಗೆ ನಿಷೇಧ ಹೇರಲಾಗಿದೆಯೇ;

ಆ) ಈ ನಿಷೇಧದಿಂದ ಇದೇ ವೃತ್ತಿಯನ್ನು ಮಾಡುವ ಕುಟುಂಬಗಳಿಗೆ ಜೀವನೋಪಾಯಕ್ಕೆ ಅಡ್ಡಿಪಡಿಸಿದಂತಾಗುವುದಿಲ್ಲವೆ;

ಇ) ಇಂಗಹ ತೀರ್ಮಾನ ಕೈಗೊಳ್ಳಲು ಕಾರಣಗಳೇನು; ಯಾವ ಯಾವ ಮೀನುಗಾರಿಕಾ ಬಂದರುಗಳಲ್ಲಿ ಇಂತಹ ನಿಷೇಧ ಮಾಡಲಾಗಿದೆ;

ಈ) ರಾಜ್ಯದ ಒಟ್ಟು ಕರಾವಳಿ ಪ್ರದೇಶ ವ್ಯಾಪ್ತಿಗಳಲ್ಲೆ ಬರುವ ಮೀನುಗಾರಿಕಾ ಬಂದರುಗಳು ಯಾವುವು;

ಉ) ಸಮುದ್ರ ದಾಳಗಳಲ್ಲಿ ಮತ್ತು ಯಂತ್ರದ ಸಹಾಯದಿಂದ ಮೀನು ಹಿಡಿಯುವುದರಿಂದ ಆಗುವ ತೊಂದರೆಗಳೇನು; ತೊಂದರೆಗಳಿದ್ದಲ್ಲಿ ಇದಕ್ಕೆ ಪ್ರತಿಯಾಗಿ ಪರ್ಯಾಯ ವ್ಯವಸ್ಥೆ ಮಾಡಲು ಸರ್ಕಾರ ಯೋಜಿಸಿದೆಯೇ; ವಿವರ ಒದಗಿಸುವುದು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ಪ್ರತಿ ವರ್ಷದ ಜೂನ್ 10 ರಿಂದ ಆಗಸ್ಟ್ 15 ರವರೆಗೆ ಮಾತ್ರ ಯಾಂತ್ರೀಕೃತ ಮೀನುಗಾರಿಕೆ ನಿಷೇಧಿಸಲಾಗಿದೆ.

ಆ) ಮತ್ತು ಇ) ಕಡಲಿನ ಹೆಚ್ಚು ಮೀನುಗಳು ಮಳೆಗಾಲದಲ್ಲಿ ಸಂತಾನೋತ್ಪತ್ತಿ ಮಾಡುವುದರಿಂದ ಮೀನುಮರಿಗಳನ್ನು ಸಂರಕ್ಷಿಸಿ, ಬೆಳವಣಿಗೆಗೆ ಅವಕಾಶ ನೀಡುವ ದೃಷ್ಟಿಯಿಂದ ಪ್ರತಿವರ್ಷ ಜೂನ್ 10ರಿಂದ ಆಗಸ್ಟ್ 15 ರವರೆಗೆ ಯಾಂತ್ರೀಕೃತ ದೋಣಿಗಳಿಂದ ಮೀನುಗಾರಿಕೆಯನ್ನು ನಿಷೇಧ ಮಾಡಲಾಗಿರುತ್ತದೆ. ಇದಲ್ಲದೆ ಮಳೆಗಾಲದ ಅವಧಿಯಲ್ಲಿ ವಿಪರೀತವಾದ ಗಾಳಿ ಮತ್ತು ಅಲೆಗಳಿಂದಾಗಿ ಯಾಂತ್ರೀಕೃತ ದೋಣಿಗಳನ್ನು ಸಮುದ್ರದಲ್ಲಿ ಬಳಸುವುದು ಸುರಕ್ಷಿತವಾಗಿರುವುದಿಲ್ಲ. ಈ ಅವಧಿಯಲ್ಲಿ ರಾಜ್ಯದ ಕರಾವಳಿಯ ಎಲ್ಲ ಮೀನುಗಾರಿಕಾ ಬಂದರುಗಳಲ್ಲಿ ಯಾಂತ್ರೀಕೃತ ದೋಣಿಗಳಿಂದ ಮೀನು ಹಿಡಿಯುವುದನ್ನು ನಿಷೇಧಿಸಿದೆ.

ಈ) ರಾಜ್ಯದ ಕರಾವಳಿಯಲ್ಲಿ ಮಂಗಳೂರು, ಮಲ್ಪೆ, ಹೊನ್ನಾವರ, ತದಡಿ ಮತ್ತು ಕಾರವಾರ ಮೀನುಗಾರಿಕಾ ಬಂದರುಗಳಿವೆ.

ಉ) ಆಳ ಸಮುದ್ರದಲ್ಲಿ ಟ್ರಾಲ್ ದೋಣಿಗಳಿಂದ ಮೀನು ಹಿಡಿಯುವುದರಿಂದ ತೀರ ಪ್ರದೇಶದಲ್ಲಿ ದೊರೆಯುವ ಮೀನಿನ ಪ್ರಮಾಣ ಕಡಿಮೆಯಾಗುತ್ತದೆಯೆಂದು ಮತ್ತು ಆಳ ಸಮುದ್ರ ಮೀನುಗಾರಿಕೆ ದೋಣಿಗಳಿಂದಾಗಿ ಸ್ಥಳೀಯ ಮೀನುಗಾರರ ಬಿಡುಬಲೆಗಳು ನಾಶವಾಗುವುದೆಂದು ಮೀನುಗಾರರು ಆರೋಪಿಸುತ್ತಿದ್ದಾರೆ. ಆಳ ಸಮುದ್ರ ಮೀನುಗಾರಿಕೆಯು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ.

***